ಅಂತಹ ತಿಳಿವಳಿಕೆಯು ವಿಮರ್ಶೆ ಮಾಡುತ್ತಿರುವ ಕೃತಿಯಲ್ಲಿಯೇ ಮೂಡಿಬರುತ್ತದೆ. ನಾನೊಬ್ಬನೇ ಅಂತ ಅಲ್ಲ. ಬಹುತೇಕ ವಿಮರ್ಶಕರು ತಮ್ಮದೇ ರೀತಿಯಲ್ಲಿ ಸ್ಪಂದಿಸ್ತಾರೆ. ಕೆಲವರು ಸಂಪೂರ್ಣ ಮೌನ ವಹಿಸುತ್ತಾರೆ. ಎಷ್ಟೋ ಸಲ ಸಮಕಾಲೀನ ಲೇಖಕರ ಬಗ್ಗೆ ಬರೆಯುವಾಗ ಕೇವಲ ಆ ಒಬ್ಬರ ಬಗ್ಗೆಯೇ ಬರೀತಿರುವುದಿಲ್ಲ. ಆ ಒಟ್ಟು ಸಮುದಾಯದ, ಆ ಕಾಲದ ಬಿಂಬ-ಪ್ರತಿಬಿಂಬಗಳನ್ನು ಕುರಿತು ಬರೀತಿರ್ತೇವೆ. ವಿಮರ್ಶೆಯು ಎಷ್ಟೋ ಸಲ ಒಂದು ಕೃತಿಗೆ ಅನ್ವಯವಾಗುವಂತೆ, ಆ ಕಾಲದ ಹಲವು ಕೃತಿಗಳಿಗೂ ಅನ್ವಯ ಆಗುತ್ತೆ. ಒಂದು ಕಾಲಘಟ್ಟದ ಬಗೆಗಿನ ಟಿಪ್ಪಣಿ ಕೂಡ ಆಗಿರುತ್ತೆ. ಸಾಮಾನ್ಯವಾಗಿ ಕಿರಿಯ ಲೇಖಕರ ಬಗ್ಗೆ ವಿಮರ್ಶೆಯಲ್ಲಿ ಯಾವಾಗಲೂ ಒಂದು ರೀತಿಯ ಅವಜ್ಞೆ ಇರುತ್ತದೆ. ಯಾರೋ ಒಬ್ಬರು ಇಬ್ಬರು ಅಂತ ನಾನು ಹೇಳ್ತಾ ಇಲ್ಲ. ಒಟ್ಟು ಆ ಸನ್ನಿವೇಶದ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಬರೆಯೋರು ತುಂಬಾ ಕಡಿಮೆ. ಇಂಥವರ ಬಗ್ಗೆ ಬರೆಯೋವಾಗ ಆ ಕಾಲಘಟ್ಟದ ಬಿಕ್ಕಟ್ಟುಗಳನ್ನು ಗುರುತಿಸುತ್ತಲೇ ಅವರಲ್ಲಿರುವ ಯೋಗ್ಯತೆಯ ಎಳೆಗಳನ್ನು ಸೂಚಿಸುವ ಕೆಲಸ ಕೂಡ ಮಾಡಬೇಕಾಗುತ್ತೆ. ನಾನು ಮುನ್ನುಡಿ-ಬೆನ್ನುಡಿ ಬರೆದವರೆಲ್ಲಾ ಮಹಾಕವಿಗಳಾಗಿಬಿಡ್ತಾರೆ, ಮಹಾನ್ ಕತೆಗಾರರಾಗಿ ಬಿಡ್ತಾರೆ ಅನ್ನೋ ಭ್ರಮೆ ಕೂಡ ನನಗಿಲ್ಲ. ಆದ್ರೆ ಅವರು ಬೆಳೆಯಬಹುದಾದ ಸಾಧ್ಯತೆಗಳನ್ನು ಹೇಳುವುದು ನನ್ನ ಕರ್ತವ್ಯ. ಎ.ಎಂ. ಮದರಿ ಅವರ 'ಗೊಂದಲಿಗ್ಯಾ' ಕೃತಿ ಬಂತು. ಆ ಕೃತಿಯ ವಿಶಿಷ್ಟತೆ ಅದರ ಬರವಣಿಗೆಯ ಸ್ವರೂಪದ ಬಗ್ಗೆ ಬರೆಯುವುದು ಒಂದು ಸಾಮಾಜಿಕವಾದ ಜವಾಬ್ದಾರಿ ಕೂಡ ಆಗಿದೆ ಅಂತ ನನಗನ್ನಿಸಿತು. 'ಲಂಕೇಶ್ ಪತ್ರಿಕೆ' ಕನ್ನಡದಲ್ಲಿ ಬಂದ ಹೊಸ ಸಾಹಿತ್ಯದ ಸ್ವರೂಪವನ್ನು ಹೇಗೆಲ್ಲಾ ಗುರುತಿಸಿತು ನೋಡಿ. ನಿರ್ಲಕ್ಷಿತ ಲೋಕದ ಅನೇಕರು ಅಲ್ಲಿ ಲೇಖಕರಾಗಿ ತೆರೆದುಕೊಂಡ್ರು. ಅವರಲ್ಲಿ ಕೆಲವರು ಬೆಳೆದ್ರು, ಇನ್ನೂ ಕೆಲವರು ಬೆಳೀಲಿಲ್ಲ, ಅದು ಬೇರೆ ವಿಷಯ. ಆದ್ರೆ ಲಂಕೇಶ್ ನಿರ್ವಹಿಸಿದ ಜವಾಬ್ದಾರಿ ಇದೆಯಲ್ಲ, ಅದು ಸಾಮಾನ್ಯವಾದದ್ದು ಅಲ್ಲ. ಹಾಗಂತ ಅವರು ತಮ್ಮ ವೈಯಕ್ತಿಕವಾದ ಸಾಹಿತ್ಯಿಕ ನಂಬಿಕೆಗಳನ್ನೂ ಬಿಡಲಿಲ್ಲ. ಅವರು ಪ್ರಪಂಚದ ಶ್ರೇಷ್ಠ ಸಾಹಿತ್ಯವನ್ನು ಓದಿಕೊಂಡಿರೋದರಿಂದ ಯಾವುದು ಉಳಿಯುತ್ತೆ, ಯಾವುದು ಉಳಿಯೋದಿಲ್ಲ ಅನ್ನೋದು ಅವರಿಗೆ ಗೊತ್ತು. ಇಂಥ ಸಂದರ್ಭದಲ್ಲಿ ಒಂದು ದ್ವಿಮುಖವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತೆ. ಒಂದು ಶ್ರೇಷ್ಠ ಕೃತಿಯ ಬಗ್ಗೆ ಬರೆಯಬೇಕಾದದ್ದು ಅಗತ್ಯ. ಹಾಗೆಯೇ ತನ್ನ ಶ್ರೇಷ್ಠತೆಯನ್ನು ಇನ್ನೂ ಪ್ರೂವ್ ಮಾಡದ ಕೃತಿಯ ಬಗ್ಗೆ ಬರೆಯೋದು ಕೂಡ ಅಗತ್ಯ. ಹೀಗಾದಾಗ ಒಂದು 'ಎಚ್ಚರ' ಬಂದುಬಿಡುತ್ತೆ. ಇದು ಕೂಡ ಎರಡು ಬಗೆಯದು. ಒಂದು ನಾವು ಯಾರ ಬಗ್ಗೆ ಬರೀತಿದ್ದೀವೊ ಅವರಲ್ಲಿ ಏಕಕಾಲಕ್ಕೆ ಭರವಸೆ ಮತ್ತು ತಿಳಿವಳಿಕೆ ಎರಡನ್ನೂ ಹುಟ್ಟಿಸಬೇಕು. ಇನ್ನೊಂದು ಬೆಳೆಯಬೇಕು, ಬದಲಾಗಬೇಕು ಅನ್ನೋ ಆಸೆಯನ್ನೂ ಹುಟ್ಟಿಸಬೇಕು. ಹಾಗಂತ ನಾನು ಬರೆದಾಕ್ಷಣ ಅವರೆಲ್ಲಾ ಬದಲಾಗ್ತಾರೆ ಅಂತಲೂ ಅಲ್ಲ. ಹೊಸಬರ ಬಗ್ಗೆ ಬರೆಯಲಿ, ಹಳೆಯ ಲೇಖಕರ ಬಗ್ಗೆ ಬರೆಯಲಿ, ಸಾಕಷ್ಟು ರಿಸರ್ವೇಶನ್ ಇಟ್ಕೊಂಡೇ ನಾನು ಬರೆದಿರೋದು. ಪ್ರಾಚೀನರ ಬಗ್ಗೆ ಬರೆಯುವಾಗ ನಿಮಗೆ ಮುಕ್ತತೆ ಯಾಕೆ ಕಂಡಿದೆ ಅಂದ್ರೆ ಅವರೆಲ್ಲಾ ನಮ್ಮ ಟೀಕೆಗಳನ್ನು ಮೀರಿ ಬೆಳೆದಿರುವವರು, ಬೆಳೆಯಬಲ್ಲವರು. ನಾವು ಟೀಕಿಸಿದಾಗಲೂ ಅವರ ಕೃತಿಯ ಇನ್ನೊಂದು ಆಯಾಮ ಗೋಚರಿಸ್ತಾ ಹೋಗುತ್ತೆ. ಇನ್ನು ಹೊಸಬರ ಮಿತಿಯನ್ನು ಹೇಳುವಾಗ ಅವರನ್ನು ಬೆಳೆಸುವ ಹಂಬಲ ಮುನ್ನೆಲೆಯಲ್ಲಿರ್ತದೆ. ಹೀಗಾಗಿ ಹೊಸಬರ ಕುರಿತ ನನ್ನ ಬರಹ ಅನೇಕರಿಗೆ ಸಿಂಪಥೆಟಿಕ್ ಆಗಿ ಕಾಣಿತಾ ಇರಬಹುದು. ಅಲ್ಲದೆ ಯಾವುದೋ ಬರಹ ಶ್ರೇಷ್ಠವಾಗಿರಲಿಕ್ಕಿಲ್ಲ. ಆದ್ರೆ ಒಂದು ವಿಶಿಷ್ಟತೆಯನ್ನು ಕಾಣಿಸ್ತಾ ಇರ್ತದೆ. ಈ ವಿಭಿನ್ನತೆಯನ್ನು ಅದರ ಮಿತಿಯ ನಡುವೆಯೂ ಗುರುತಿಸಬೇಕಾಗುತ್ತೆ. ಇದನ್ನು ಹೇಳುವುದು ಕೂಡ ನನ್ನ ಜವಾಬ್ದಾರಿ. ಅದು ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಾಯಿಸುತ್ತೆ ಅಂತನೂ ಅಲ್ಲ. ಆದರೆ ಆ ಬರಹದ ಸ್ವರೂಪದೊಳಗಡೆ ನಡೆಯುತ್ತಿರುವ ಒಂದು ಪ್ರಾಮಾಣಿಕ ತಾಕಲಾಟ ಇದೆಯಲ್ಲಾ, ಅದು ನನ್ನನ್ನು ಕಾಡುತ್ತೆ. ಅವನು/ ಅವಳು ಶ್ರೇಷ್ಠರೊ ಅಲ್ಲವೋ ಗೊತ್ತಿಲ್ಲ. ಆದರೆ ಒಬ್ಬ ವಿಮರ್ಶಕನಾಗಿ ಆ ಪ್ರಾಮಾಣಿಕವಾದ ತಾಕಲಾಟವನ್ನು ಹೇಳದೆ ಇರಲಾರೆ. ಇದನ್ನೆಲ್ಲ ಹೇಳುವುದು ಒಂದು ಸಾಂಸ್ಕೃತಿಕವಾದ ಹೊಣೆಗಾರಿಕೆ ಅಂತಲೂ ನಾನು ಭಾವಿಸಿದ್ದೇನೆ. ಈ ಹೊಣೆಗಾರಿಕೆ ಎಷ್ಟೋ ಸಲ